ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ರಾಜ್ಯದಲ್ಲಿ ಜಾರಿ ಇರುವ ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್ ಕುರಿತು

ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)-

68(414) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ರಾಜ್ಯದಲ್ಲಿ ಜಾರಿ ಇರುವ ``ಗ್ರಾಮೀಣ ಭಾರತಕ್ಕೆ ಸಸ್ಯಾಧಾರಿತ ವಿದ್ಯುತ್'' (Biomass Energy for Rural India-BERI)ಯೋಜನೆಯ ನಿರ್ವಹಣೆಯನ್ನು ಯಾವ ಮಂಡಳಿಗೆ ವಹಿಸಲಾಗಿದೆ;

(ಆ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಈ ಯೋಜನೆಯ ಪುನರಾರಂಭಕ್ಕೆ ತಜ್ಞರ ಸಮಿತಿಯನ್ನು ರಚಿಸಲಾಗಿದೆಯೇ; ಹಾಗಿದ್ದಲ್ಲಿ, ಈ ತಜ್ಞರ ಸಮಿತಿಯನ್ನು ರಚಿಸಿರುವ ಉದ್ದೇಶಗಳೇನು ; ಅದರ ಕಾರ್ಯವ್ಯಾಪ್ತಿ ಏನು ;

(ಇ) ಆ ಸಮಿತಿಯು ವರದಿ ಸಲ್ಲಿಸಲು ಕಾಲಮಿತಿಯೇನಾದರೂ ವಿಧಿಸಲಾಗಿದೆಯೇ; ಹಾಗಿದ್ದಲ್ಲಿ, ವರದಿ ಸಲ್ಲಿಸುವ ಬಗ್ಗೆ ಸಮಿತಿ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ಸರ್ಕಾರದ ಮಹತ್ತರವಾದ ಈ ಯೋಜನೆಯ ಅನುಷ್ಠಾನಕ್ಕಾಗಿ ತುಮಕೂರು ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಹಣ ಹೂಡಿಕೆ ಮಾಡಿ ಈ ಯೋಜನೆಯನ್ನು ನಿಲ್ಲಿಸಲು ಕಾರಣಗಳೇನು ; (ವಿವರ ನೀಡುವುದು)

(ಉ) ಈ ಯೋಜನೆಯನ್ನು ಪುನರಾರಂಭಿಸಿದ ನಂತರ ರಾಜ್ಯದ ಎಲ್ಲಾ ಭಾಗಗಳಿಗೂ ವಿಸ್ತರಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವ ಯಾವ ಜಿಲ್ಲೆಗಳಿಗೆ ಮತ್ತು ಯಾವಾಗ ವಿಸ್ತರಿಸಲಾಗುವುದು ; ಈ ಕುರಿತು ಸರ್ಕಾರದ ನಿಲುವೇನು?